ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ಉಪತಹಶೀಲ್ದಾರವರ ಕಾರ್ಯಾಲಯ ನಾಡಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾಕಹೊ/11/2016-17. ದಿನಾಂಕ:26-06-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಓಂಕಾರಿ ತಂದೆ ಎ.ರಾಮಣ್ಣ<br>ಮಾಕನಡುಕು ಗ್ರಾಮ<br>2)ಬಸಮ್ಮ ಗಂಡ ಲೇಟ್ ನಿಂಗಪ್ಪ<br>3)ನಾಗಪ್ಪ ತಂದೆ ಲೇಟ್ ನಿಂಗಪ್ಪ<br>4)ಬೋರಮ್ಮ ಗಂಡ ಲೇಟ್ ಗಂಗಪ್ಪ<br>5)ಶೇಖರಪ್ಪ ತಂದೆ ಲೇಟ್ ಲಿಂಗಪ್ಪ<br>ಸಕಲಾಪುರದಹಟ್ಟಿ ಗ್ರಾಮ<br>ಕೂಡ್ಲಿಗಿ ತಾಲೂಕು | ಹಿರಿಯಕ್ಕ ಗಂಡ ಶೇಖರಪ್ಪ<br>ಸಕಲಾಪುರದಹಟ್ಟಿ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಹುಲಿಕೇರಿ ಗ್ರಾಮದ ಸನಂ 234/2ಪೈಕಿ. ವಿಸ್ತೀರ್ಣ 1-50. ಎಕ್ರೆ ಜಮೀನನ್ನು ಕ್ರಯ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಹುಲಿಕೇರಿ ಗ್ರಾಮದ ಸನಂ 234/2ಪೈಕಿ. ವಿಸ್ತೀರ್ಣ 1-50. ಎಕ್ರೆ ಜಮೀನನ್ನು ಸದರಿ ತಾಲೂಕು ಸಕಲಾಪುರದಹಟ್ಟಿ ಗ್ರಾಮದ ಬಸಮ್ಮ ಗಂಡ ಲೇಟ್ ನಿಂಗಪ್ಪ. ನಾಗಪ್ಪ ತಂದೆ ಲೇಟ್ ನಿಂಗಪ್ಪ. ಬೊರಮ್ಮ ಗಂಡ ಲೇಟ್ ಗಂಗಪ್ಪ. ಶೇಖರಪ್ಪ ತಂದೆ ಲೇಟ್ ಲಿಂಗಪ್ಪ ಇವರಿಂದ ಸದರಿ ತಾಲೂಕು ಮಾಕನಡುಕು ಗ್ರಾಮದ ಓಂಕಾರಿ ತಂದೆ ಎ.ರಾಮಣ್ಣ ಇವರು ದಿನಾಂಕ 04-04-2014 ರ ಡಾಕ್ಯುಮೆಂಟ್ ನಂಬರ್:30/2016-17. ರ ಪ್ರಕಾರ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಹುಲಿಕೇರಿ ಇವರು ನಮೂನೆ-21 ನೋಟಿಸನ್ನು ದಿನಾಂಕ 11-04-2016 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ತಾಲೂಕು ಸಕಲಾಪುರದಹಟ್ಟಿ ಗ್ರಾಮದ ಹಿರಿಯಕ್ಕ ಗಂಡ ಶೇಖರಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 27/2015-16. ದಿನಾಂಕ 12-05-2016 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 30-05-2016 ರಿಂದ 20-06-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ.. ಅರ್ಜಿದಾರರು ಹುಲಿಕೇರಿ ಗ್ರಾಮದ ಸನಂ 234/2ಪೈಕಿ. ವಿಸ್ತೀರ್ಣ 1-50. ಎಕ್ರೆ ಜಮೀನನ್ನು ಸದರಿ ತಾಲೂಕು ಸಕಲಾಪುರದಹಟ್ಟಿ ಗ್ರಾಮದ ಬಸಮ್ಮ ಗಂಡ ಲೇಟ್ ನಿಂಗಪ್ಪ. ನಾಗಪ್ಪ ತಂದೆ ಲೇಟ್ ನಿಂಗಪ್ಪ. ಬೋರಮ್ಮ ಗಂಡ ಲೇಟ್ ಗಂಗಪ್ಪ. ಶೇಖರಪ್ಪ ತಂದೆ ಲೇಟ್ ಲಿಂಗಪ್ಪ ಇವರಿಂದ ದಿನಾಂಕ 04-04-2016.

ರ ಡಾಕ್ಯುಮೆಂಟ್ ನಂಬರ್: 30/2016-17 ರ ಪ್ರಕಾರ ರೂ: 1.82.000/- ಗಳಿಗೆ ಖಂಡಿತ ಕ್ರಯಕ್ಕೆ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತಾರೆ. ಸದರಿ ಕ್ರಯ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಹಾಜರಾಗಿದ್ದು ಸದರಿ ವಿವಾದಿತ ಜಮೀನು ನಮ್ಮ ಪಿತ್ರಾರ್ಜಿತ ಜಮೀನು ಆಗಿದ್ದು ನನ್ನ ಪತಿಯಾದ ಶೇಖರಪ್ಪ ತಂದೆ ಲೇಟ್ ಲಿಂಗಪ್ಪ ಇವರು ನನ್ನನ್ನು ಬಿಟ್ಟಿರುತ್ತಾರೆಂದು ನನ್ನ ಉಪ ಜೀವನಕ್ಕೆ ಆಸ್ತೀಯನ್ನು ನೀಡಿರುವುದಿಲ್ಲ ಕಾರಣ ಸದರಿ ಕ್ರಯ ಪತ್ರ ಪ್ರಕಾರ ಕ್ರಯದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ನಮ್ಮ ತಕರಾರು ಇರುವುದಾಗಿ ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆ ಮತ್ತು ತಕರಾರುದಾರರ ಹೇಳಿಕೆಗಳನ್ನು ಕೇಳಿ ಈ ಪ್ರಕರಣದಲ್ಲಿ ನೊಂದಾಯಿತ ಕ್ರಯ ಪತ್ರದ ವ್ಯವಹಾರವು ವಿಷಯ ವಸ್ತುವಾದುದ್ದರಿಂದ ಕಂದಾಯ ನ್ಯಾಯಾಲಯವು ಅದನ್ನು ರದ್ದು ಪಡಿಸುವ ಅಧಿಕಾರ ಇಲ್ಲದಿರುವುದರಿಂದ ಅದರನ್ವಯ ಹಕ್ಕು ಬದಲಾವಣೆ ಮಾಡಲು ಆದೇಶಿಸುತ್ತಾ ತಕರಾರುದಾರರು ತಮ್ಮ ಜೀವನಾಂಶವನ್ನು ಪಡೆಯಲು ಮಾನ್ಯ ಸಿವಿಲ್ ನ್ಯಾಯಲಯದ ಮೊರೆ ಹೋಗುವಂತೆ ಸೂಚಿಸುತ್ತಾ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಹುಲಿಕೇರಿ ಗ್ರಾಮದ ಸನಂ 234/2ಪೈಕಿ. ವಿಸ್ತೀರ್ಣ 1-50. ಎಕ್ರೆ ಜಮೀನನ್ನು ದಿನಾಂಕ 04-04-2016 ರ ಡಾಕ್ಯುಮೆಂಟ್ ನಂಬರ್: 30/2016-17 ರ ಕ್ರಯ ದಸ್ತಾವೇಜು ಪ್ರಕಾರ ಅರ್ಜಿದಾರರಾದ ಹಾಗೂ ಕ್ರಯದಾರರಾದ ಓಂಕಾರಿ ತಂದೆ ಎ.ರಾಮಣ್ಣ ಮಾಕನಡುಕು ಗ್ರಾಮ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 20-06-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪ ತಹಶೀಲ್ದಾರರು
ನಾಡಕಛೇರಿ ... ಹಳ್ಳಿ
ಹೊಸಹಳ್ಳಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಓಂಕಾರಿ ತಂದೆ ಎ.ರಾಮಣ್ಣ. ಮಾಕನಡುಕು ಗ್ರಾಮ ಬಸಮ್ಮ ಗಂಡ ಲೇಟ್ ನಿಂಗಪ್ಪ. ನಾಗಪ್ಪ ತಂದೆ ಲೇಟ್ ನಿಂಗಪ್ಪ. ಬೋರಮ್ಮ ಗಂಡ ಲೇಟ್ ಗಂಗಪ್ಪ. ಶೇಖರಪ್ಪ ತಂದೆ ಲೇಟ್ ನಿಂಗಪ್ಪ ಸಕಲಾಪುರದಹಟ್ಟಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಹಿರಿಯಕ್ಕ ಗಂಡ ಶೇಖರಪ್ಪ ಸಕಲಾಪುರದಹಟ್ಟಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.